7. ಪರ್ನ್‌ಹೌಸ್ ನವೀಕರಿಸಲಾಗಿದೆ.

8. ಜಪಾನ್ ಮಾದರಿ ತೋಟದಲ್ಲಿ ನವೀಕರಣ ತಾವರೆಕೊಳದಲ್ಲಿ ಕೃತಕ ಜಲಪಾತ ನವೀಕರಿಸಲಾಗಿದೆ.

9. ಸಸ್ಯ ತೋಟದಲ್ಲಿನ ಕೆಲವು ಭಾಗದಲ್ಲಿ ಸೂಕ್ತ ಅಲಂಕಾರಿಕ ಗಿಡಗಳನ್ನು ವೈಜ್ಞಾನಿಕ ರೀತಿಯಲ್ಲಿ ನೆಡಲಾಗಿದೆ.

10. ಲಾನ್ ಮತ್ತು ಮರಗಿಡಗಳು ಹಾಗೂ ಹೂವಿನ ಗಿಡಗಳಿಗೆ ನೀರಿನ ಸೌಕರ್ಯ ಕಲ್ಪಿಸಲಾಗಿದೆ.

ದೊಡ್ಡ ಆಲದಮರಕ್ಕೆ ಬಸ್ ಸೌಲಭ್ಯ

741 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮೂಹಳ್ಳಿ ಬಳಿ ಇರುವ ದೊಡ್ಡ ಆಲದಮರ ಒಂದು ಪ್ರವಾಸಿ ಸ್ಥಳವೆಂಬುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ರಜಾ ದಿನಗಳಂದು ಇಲ್ಲಿಗೆ ಬೆಂಗಳೂರು ಬಸ್ ನಿಲ್ದಾಣ, ಜಯನಗರ ಹಾಗೂ ಶಿವಾಜಿನಗರಗಳಿಂದ ಪುಷ್ಪಕ್ ಬಸ್ ಓಡಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಹೌದು.

ಆ) ಪರಿಶೀಲಿಸಲಾಗುವುದು.

ಬೆಂಗಳೂರು ನಗರ ಸಾರಿಗೆ ಬಸ್ ನಿಲ್ದಾಣದಿಂದ ಪ್ರಯಾಣಿಸುವವರ ಬಗ್ಗೆ

742 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರ ಸಾರಿಗೆ ಬಸ್ ನಿಲ್ದಾಣದಿಂದ ಪ್ರತಿದಿನ ಪ್ರಯಾಣಿಸುವ ಹಾಗೂ ಬಂದಿಳಿಯುವ ಪ್ರಯಾಣಿಕರ ಸರಾಸರಿ ಸಂಖ್ಯೆಯೆಷ್ಟು?

ಆ) ಈ ನಿಲ್ದಾಣದಲ್ಲಿ ಪ್ಯಾಸೆಂಜರ್ ಲಾಂಜ್ ಸ್ಥಾಪಿಸಲು ಸರ್ಕಾರದವರು ಉದ್ದೇಶಿಸಿದೆಯೇ?

ಇ) ಹಾಗಿದ್ದಲ್ಲಿ ಪ್ರಯಾಣಿಕರಿಗೆ ಒದಗಿಸಲಿರುವ ಸೌಲಭ್ಯಗಳು ಯಾವುವು?

ಈ) ಈ ಸೌಲಭ್ಯವನ್ನು ಯಾವಾಗ ಒದಗಿಸಲಾಗುವುದು?

ಉ) ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) :

ಅ) ಪ್ರತಿದಿನ ಸರಾಸರಿ ಸುಮಾರು 3.25 ಲಕ್ಷ ಪ್ರಯಾಣಿಕರು ಪ್ರಯಾಣಿಸುತ್ತಾರೆ, ಹಾಗೂ ಸರಾಸರಿ ಸುಮಾರು 2.75 ಲಕ್ಷ ಪ್ರಯಾಣಿಕರು ಬಂದಿಳಿಯುತ್ತಾರೆ.

ಆ) ಇಲ್ಲ.

ಇ) ಪ್ರಯಾಣಿಕರ ಅನುಕೂಲಕ್ಕಾಗಿ ಈ ಕೆಳಕಂಡ ಸೌಲಭ್ಯ ಒದಗಿಸಲಾಗಿದೆ.

1. ಶೌಚಾಲಯ ಸೌಲಭ್ಯ
2. ಕುಡಿಯುವ ನೀರಿನ ಸೌಲಭ್ಯ
3. ಮಾರ್ಗಸೂಚಿಗಳು ಮತ್ತು ನಕ್ಷೆಗಳು (ಪ್ಲಾಟ್‌ಫಾರಂವಾರು)
4. ಔಷಧ ಅಂಗಡಿ
5. ಪ್ರಯಾಣಿಕರಿಗೆ ಧ್ವನಿವರ್ಧಕದ ಮೂಲಕ ಮಾಹಿತಿ ಸೌಲಭ್ಯ.
6. ಆಸನಗಳ ವ್ಯವಸ್ಥೆ.
7. ಬೇಕರಿ
8. ಉಪಹಾರಗೃಹ
9. ಹಾಪ್‌ಕಾಮ್ಸ್ ಮತ್ತು ಹಣ್ಣಿನ ಅಂಗಡಿ
10. ಐಸ್‌ಕ್ರೀಮ್ ಪಾರಲರ್
11. ಹಣ್ಣಿನ ರಸದ ಅಂಗಡಿ
12. ಪಾನ್‌ಬೀಡಾ ಸ್ಟಾಲ್
13. ವಿಚಾರಣಾ ಕೇಂದ್ರ
14. ಪುಸ್ತಕದ ಅಂಗಡಿ
15. ಸಿದ್ದ ಉಡುಪಿನ ಅಂಗಡಿ
16. ಸಾರ್ವಜನಿಕ ದೂರವಾಣಿ ಕೇಂದ್ರ ಸೌಲಭ್ಯ

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.